ವಿಚಿತ್ರ ಅನಿಸಿತು. ಕನ್ನಡದಲ್ಲಿ ಕುರ್ತಕೋಟಿ ಅವರನ್ನು ಬಿಟ್ಟರೆ ಯಾರೂ ಬೇಂದ್ರೆ ಬಗ್ಗೆ ಬರೆದಿರಲೇ ಇಲ್ಲ. 'ಅರಳುಮರುಳು'ವರೆಗಿನ ಬೇಂದ್ರೆ ಮಾತ್ರ ಕವಿ, ನಂತರದ ಅವರ ಕಾವ್ಯ ಕಾವ್ಯವೇ ಅಲ್ಲ' ಎಂದು ಶಿವರುದ್ರಪ್ಪ, ಅಡಿಗ, ಅನಂತಮೂರ್ತಿ ಎಲ್ಲರೂ ನಿರ್ಧಾರ ಮಾಡಿಬಿಟ್ಟಿದ್ದರು. ಈ ಕುರಿತು ನನಗೆ ಆಶ್ಚರ್ಯವಾಯಿತು. ಬೇಂದ್ರೆಯವರ ಬಗ್ಗೆ ಬರೆಯುವ ಸವಾಲನ್ನು ತೆಗೆದುಕೊಂಡೆ. ಆಗಿನ ಕಾಲಕ್ಕೆ ಒಬ್ಬ ಲೇಖಕನ ಸಮಗ್ರ ಕೃತಿಗಳ ಕುರಿತಾಗಿ ಬಂದ ಪುಸ್ತಕಗಳು ಕನ್ನಡದಲ್ಲಿ ಕಡಿಮೆ. ಆದರೆ, ಈವತ್ತಿಗೂ ನನಗೆ ಯಾವುದೇ ಒಬ್ಬ ಲೇಖಕನ ಬಗ್ಗೆ ಮತ್ತೆ ಮತ್ತೆ ಬರೆಯಬೇಕು ಎಂದು ಅನಿಸುವುದಿದ್ದರೆ ಅದು ಬೇಂದ್ರೆ ಬಗ್ಗೆ. ನಿಜವಾದ ಕವಿ ಅವರು. ಅವರನ್ನು ಬೇರೆ ಬೇರೆ ಆಯಾಮಗಳಿಂದ ನೋಡಿದ್ದೇನೆ. ಇನ್ನೂ ಪೂರ್ತಿ ತಿಳಿದಿದ್ದೇನೆ ಅನಿಸಿಲ್ಲ.

● 'ವಿಮರ್ಶೆ ಎನ್ನುವುದು ಒಂದು ಜ್ಞಾನಪ್ರಕಾರ. ಆದ್ದರಿಂದಲೇ ವಿಮರ್ಶಕನಲ್ಲಿ ಸ್ಫೂರ್ತಿಗಿಂತ ಹೆಚ್ಚಾಗಿ ವ್ಯುತ್ಪತ್ತಿ ಇರಬೇಕು' ಅಂತ ಒಂದು ಕಡೆ ಬರೆದಿದ್ದೀರಿ. ಆ ಕುರಿತು ವಿವರಿಸಬಹುದೆ?

ಯಾರಿಗಾದರೂ ವ್ಯುತ್ಪತ್ತಿ ಬೇಕು. ಓದುಗರಿಗೂ ಅದು ಬೇಕು. ಪತ್ತೆದಾರಿ ಕಾದಂಬರಿ ಓದುವವರಿಗೂ ವ್ಯುತ್ಪತ್ತಿ ಬೇಕೇ ಬೇಕು. ಪತ್ತೆದಾರಿ ಕಾದಂಬರಿಯಷ್ಟು ವೆಲ್ ಇನ್ಫಾರ್ಮ್ಡ್ ಬೇರೆ ಇರುವುದಿಲ್ಲ. ಯಾವುದೋ ನ್ಯೂಕ್ಲಿಯರ್ ಸೀಕ್ರೆಟ್ ಬಗ್ಗೆ ಒಂದು ಕಾದಂಬರಿ ಬರೆಯಬೇಕು ಎಂದರೆ ಎಷ್ಟು ಅಧ್ಯಯನ ಮಾಡಬೇಕಲ್ಲ ಅವರು. ವಿಮರ್ಶಕ ಸ್ಫೂರ್ತಿಯನ್ನು ಅರಸುತ್ತ ಕೂಡುವುದಕ್ಕಾಗುವುದಿಲ್ಲ. ಬರೆಯುತ್ತಿರುವಾಗ ಹಲವು ಕೃತಿಗಳ ಮಧ್ಯದ ಸಾದೃಶ್ಯ ನೆನಪಾಗುತ್ತದೆ. ಇಂಥ ಸಂಗತಿಗಳು ಒಂದು ಬಗೆಯಲ್ಲಿ ಸ್ಫೂರ್ತಿ ನೀಡಬಹುದು ಅಷ್ಟೆ. ಅನಂತಮೂರ್ತಿ ಅವರ 'ಸೂರ್ಯನ ಕುದುರೆ' ಮತ್ತು ಕಾರಂತರ 'ಬೆಟ್ಟದ ಜೀವ' ನಡುವೆ ಇರುವ ಹೋಲಿಕೆಯ ಕುರಿತು ಬರೆದಿದ್ದೆ. ಕೊನೆಗೆ ಅನಂತಮೂರ್ತಿ ಅವರೂ ಒಂದು ಕಡೆ ತನ್ನ ಮೇಲೆ ಕಾರಂತರು ಮತ್ತು ಕುವೆಂಪು ಅವರ ಪ್ರಭಾವ ಇರುವುದನ್ನು ಒಪ್ಪಿಕೊಂಡಿದ್ದರು.

● ಕನ್ನಡ ಸಾಹಿತ್ಯಕ್ಕೆ ದೀರ್ಘ ಪರಂಪರೆ ಇದೆ. ಆದರೆ ವಿಮರ್ಶೆಗೆ ನಮ್ಮಲ್ಲಿ ಒಂದು ಪರಂಪರೆ ಕಾಣುವುದಿಲ್ಲ. ನೀವು ಒಂದು ರೀತಿಯಲ್ಲಿ ಈ ಸಾಹಿತ್ಯ ವಿಮರ್ಶೆಯ ಮೂಲಪುರುಷರಲ್ಲಿ ಒಬ್ಬರು ಎಂದೇ ಹೇಳಬಹುದು. ಆದರೆ ನಮ್ಮಲ್ಲಿ ಹಳಗನ್ನಡ ಪಠ್ಯಗಳ ಪಠ್ಯದ ಸಂಪಾದನೆ, ಸಂಸ್ಕರಣೆ, ವ್ಯಾಖ್ಯಾನಗಳು ಆಗಿವೆ. ಅವೂ ಒಂದು ಬಗೆಯ ವಿಮರ್ಶೆಯ ಕೆಲಸಗಳೇ ಅಲ್ಲವೇ?

ಒಂದು ಗ್ರಂಥದ ಸರಿಯಾದ ಪಠ್ಯ ಸಿಗದ ಹೊರತು ಅದರ ಕುರಿತು ಸರಿಯಾದ ವ್ಯಾಖ್ಯಾನವೂ ಸಾಧ್ಯವಿಲ್ಲ. ಸರಿಯಾದ ಪಠ್ಯವನ್ನು ಹುಡುಕುವುದೂ ಸಂಸ್ಕರಿಸುವುದೂ ಕೂಡ ಒಂದು ಶಾಸ್ತ್ರವೇ. ಅದೊಂದು ವಿಜ್ಞಾನ. ಅದು ಬೇಕೇ ಬೇಕು.

ನಾನು ಹುಟ್ಟಿದ್ದು 1925ರಲ್ಲಿ. ಸುಮಾರು 22 ವರ್ಷ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಯಾಗಿಯೇ ನಾನು ಬೆಳೆದಿದ್ದು. ನಮ್ಮ ಶತಮಾನದಲ್ಲಿ ಆದಷ್ಟು ಬೆಳವಣಿಗೆ ಬೇರೆ ಯಾವ ಶತಮಾನದಲ್ಲಿಯೂ ಆಗಿಲ್ಲ. ಅಸಹಕಾರ ಚಳವಳಿ ನಡೆದಾಗ ನನಗೆ ಎಂಟು ವರ್ಷ. ನನ್ನ ತಂದೆ ಸರ್ಕಾರಿ ನೌಕರರಾಗಿದ್ದರು. ನಾನು ಹೈಸ್ಕೂಲಲ್ಲಿದ್ದಾಗ ಕ್ವಿಟ್ ಇಂಡಿಯಾ ಚಳವಳಿ. ಕಾಲೇಜಿಗೆ ಬಂದಾಗ ಸ್ವಾತಂತ್ರ್ಯ ಪಡೆದುಕೊಂಡಿದ್ದು. ನಂತರ ರಿಪಬ್ಲಿಕ್ ಆಗಿದ್ದು... ಹೀಗೆ ಹಲವು ಘಟನೆಗಳು ನಡೆದಿವೆ. ನನ್ನ ವೈಯಕ್ತಿಕ ಬದುಕಿನಲ್ಲಿಯೂ ಹಲವು ಪಲ್ಲಟಗಳು ಆದವು. ನಮ್ಮ ಮನೆತನ ಮೂಲದಲ್ಲಿ ತಮಿಳುನಾಡಿನಲ್ಲಿತ್ತು ಎಂದು ಸಂಶೋಧಕರು ಹೇಳ್ತಾರೆ. ಅವರ ಪ್ರಕಾರ ಆಮೂರ ಎನ್ನುವುದು ಒಂದು ಹಳ್ಳಿ, ಕೋಟೆಯಂತೆ. ಅಲ್ಲಿಂದ ಕರ್ನಾಟಕಕ್ಕೆ ಯಾಕೆ ಬಂದರೋ ಗೊತ್ತಿಲ್ಲ. ಬರಗಾಲದಿಂದ ಅಥವಾ ಪಂಡಿತರನ್ನು, ಕರಕುಶಲ ಕರ್ಮಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ರಾಜರು ಕರೆಸಿಕೊಳ್ಳುತ್ತಿದ್ದರಲ್ಲ, ಹಾಗೆ ಬಂದಿರಬಹುದು.